# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1868 / 2024

ಪಿರ್ಯಾದುದಾರರು ಃ ಮಾಗಡಿ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿತರು** ಃ **1. ತಿಲಕ್ ಬಿನ್ ಲೇಟ್ ಮುದ್ದುರಂಗಯ್ಯ**
**19 ವರ್ಷಗಳು,**
**ವಾಸಃ ದಂಡಿಗೆಪುರ ಗ್ರಾಮ,**
**ಕಸಬಾ ಹೋಬಳಿ,**
**ಮಾಗಡಿ ತಾಲ್ಲೂಕು .**

**2. ನೇತ್ರಾವತಿ ಕೋಂ ಲೇಟ್ ಮುದ್ದುರಂಗಯ್ಯ**
**45 ವರ್ಷಗಳು,**
**ವಾಸಃ ದಂಡಿಗೆಪುರ ಗ್ರಾಮ,**
**ಕಸಬಾ ಹೋಬಳಿ,**
**ಮಾಗಡಿ ತಾಲ್ಲೂಕು .**

## ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ

**ಪ್ರಶ್ನೆ-1** ಃ ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-2 ಃ ಪ್ರಾಸಾ-01 ಃ ರಾಜಮ್ಮ ರವರು** ತಮ್ಮ ಸಾಕ್ಷ್ಯದಲ್ಲಿ ತಮ್ಮ ಜಮೀನಿನಲ್ಲಿ ಮರಗಳು ಇದ್ದವು. ಕಲ್ಲಯ್ಯನ ಮಗ ಬಸವರಾಜ ರವರು ಸದರಿ ಮರಗಳನ್ನು ಖರೀದಿ ಮಾಡಿದ್ದರು. 20 ದಿನ ಮೇಲಾದರೂ ಹಣವನ್ನು ಕೊಟ್ಟಿದ್ದಿರಲಿಲ್ಲ. ಸದರಿ ಮರಗಳನ್ನು ಕೊಡಿಸಿದ ದಳ್ಳಾಳಿಗಳನ್ನು 2-3 ಭಾರಿ ಹುಡುಕಿದರೂ ಸಿಕ್ಕಿದ್ದಿರಲಿಲ್ಲ. ನಂತರ ತಾನು ತನ್ನ ಮನೆಗೆ ಬಂದು ಸದರಿ ಮರಗಳನ್ನು ಪುಕ್ಕಟೆಗೆ ಕೊಟ್ಟಿರುವುದಿಲ್ಲ ಎಂದು ತನ್ನ ಪಾಡಿಗೆ ತಾನು ಜಗತಿಯ ಮೇಲೆ ಕೂತಿದ್ದೆನು. ದಿನಾಂಕ 29.01.2024 ರಂದು ಆರೋಪಿಗಳು ಒಂದು

ಕಬ್ಬಿಣದ ರಾಡನ್ನು ತಂದರು ತಾನು ಏನೋ ಇರಬಹುದು ಎಂದು ಸುಮ್ಮನೆ ಇದ್ದೆನು. 1ನೇ ಆರೋಪಿಯು ದೊಣ್ಣೆಯಿಂದ ತನ್ನ ಮೈಕೈಗೆ ಹಲ್ಲೆ ಮಾಡಿರುತ್ತಾನೆ. 2ನೇ ಆರೋಪಿಯು ಕಬ್ಬಿಣದ ರಾಡಿನಿಂದ ಹೊಟ್ಟೆ ಮೇಲೆ ಹಾಗೂ ಮಂಡಿ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-3 ಃ ಪ್ರಾಸಾ-1 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆಗ ಚಾಸಾ 2,3 ಮತ್ತು 5 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಚಾಸಾ 2 ರವರು ತನ್ನ ಮಗನಾದ ಚಾಸಾ 4 ರವರಿಗೆ ಪೋನ್ ಮಾಡಿದಾಗ ಚಾಸಾ 4 ರವರು ಬಂದು ತನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಡ್ಮಿಟ್ ಮಾಡಿರುತ್ತಾರೆ. ಪೋಲಿಸರು ಬಂದು ಹೇಳಿಕೆಯನ್ನು ಪಡೆದಿರುತ್ತಾರೆ. ದೂರನ್ನು ಕೊಟ್ಟ ನಂತರ ಪೋಲಿಸರು ಮಹಜರನ್ನು ಜರುಗಿಸಲು ಪೆಬ್ರುವರಿ 22ರಂದು ಚಾಸಾ 2 ಮತ್ತು 5 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಸಹಿಯನ್ನು ಪಡೆದಿರುತ್ತಾರೆ. ಮಹಜರ್ ಸಮಯದಲ್ಲಿ ದೊಣ್ಣೆ ಮತು ರಾಡನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?
**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-4 ಃ ಪ್ರಾಸಾ-2 ಮರಿಯಮ್ಮ ರವರು** ತಮ್ಮ ಸಾಕ್ಷ್ಯದಲ್ಲಿ ಚಾಸಾ 1 ಮತ್ತು ಆರೋಪಿಗಳ ನಡುವೆ ಆದ ಗಲಾಟೆ ಸಂಬಂಧ ಪೋಲಿಸರು ಮಹಜರ್ ಗೆ ಬಂದಾಗ ಸದರಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಮಹಜರ್ ಸಮಯದಲ್ಲಿ ದೊಣ್ಣೆ ಮತ್ತು ರಾಡನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಮಹಜರ್ ಸಮಯದಲ್ಲಿ ಚಾಸಾ 3 ರವರು ಮತ್ತು ತಾನು ಇದ್ದೆವು ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?
**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-5 ಃ ಪ್ರಾಸಾ-3 ನರಸಿಂಹಯ್ಯರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.01.2024 ರಂದು ಸಂಜೆ 6.30 ರ ಸಮಯದಲ್ಲಿ ತಾನು ಮನೆ ಹತ್ತಿರ ನಿಂತಿದ್ದೆನು. ಆರೋಪಿಗಳ ಮನೆಗೂ ತಮ್ಮ ಮನೆಗೂ 200 ಮೀಟರ್ ದೂರ ಇರುತ್ತದೆ. ಆಗ ಚಾಸಾ1ರವರು ತನ್ನ ಮನೆಯ ಹತ್ತಿರ ಬಂದು ತನಗೆ ಆರೋಪಿಗಳು ಹಲ್ಲೆ ಮಾಡಿರುತ್ತಾರೆ ಬಾ ಎಂದು ಕರೆದರು. ತಾನು ಹೋದಾಗ

ಗಲಾಟೆ ಮಾಡಿಕೊಂಡು ಸುಮ್ಮನಾಗಿದ್ದರು. ನಂತರ ತಾನು ಮತ್ತು ಚಾಸಾ 3 ರವರು ಆರೋಪಿಗಳ ಮನೆಯ ಹತ್ತಿರ ಕೇಳಲಿಕ್ಕೆ ಹೋದೆವು ಎಂದು ನುಡಿದಿದ್ದು, ಈ ಬಗ್ಗೆ ನೀವುಏನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-6 ಃಪ್ರಾಸಾ-3 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆಗ ತಾನು 2ನೇ ಆರೋಪಿಗೆ ಏಕೆ ಚಾಸಾ 1 ರವರಿಗೆ ಹೊಡೆದಿರುತ್ತೀಯಾ ಎಂದು ಕೇಳಿದೆನು ಆಗ 2ನೆ ಆರೋಪಿಯು ಚಾಸಾ 1 ರವರು ನನ್ನ ತಾಯಿಗೆ ಅವಾಚ್ಯಶಬ್ದಗಳಿಂದ ಬೈಯ್ಯುತ್ತಾರೆ ಎಂದು ಹೇಳಿರುತ್ತಾರೆ. ಅಕ್ಕಪಕ್ಕದವರಿಗೆ ಹೇಳಬಹುದಿತ್ತು ಏಕೆ ಹೊಡೆದಿರುತ್ತೀಯಾ ಎಂದು ಕೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾರೆ ಎಂದು ತನ್ನ ಮುಂದೆಯೆ ಚಾಸಾ 1 ರವಗೆ ಹಲ್ಲೆ ಮಾಡಿರುತ್ತಾರೆ. ನಂತರ ತಾನು ಯಾರ ಮುಂದೆಯಾದರೂ ನ್ಯಾಯ ಮಾಡಿಸಿಕೊ ಎಂದು ತಾನು ಮತ್ತು ಚಾಸಾ 3ರವರು ವಾಪಸ್ಸು ಬಂದಿರುತ್ತೇವೆ. ದಿನಾಂಕ 02.02.204 ರಂದು ಮಹಜರ್ ಮಾಡಲು ಬಂದಾಗ ಮನೆಯ ಹತ್ತಿರದಲ್ಲಿ ಸಹಿಯನ್ನು ಮಾಡಿರುತ್ತೇನೆ, ಆ ಸಮಯದಲ್ಲಿ ತನ್ನ ಜೊತೆ ಯಾರೂ ಇದ್ದಿರಲಿಲ್ಲ ಎಂದು ನುಡಿದಿದ್ದು, ಈ ಬಗ್ಗೆ ನೀವುಏನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-7 ಃ ಪ್ರಾಸಾ-4 ರಂಗನಾಥ್ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29-01-2024 ರಂದು ಸಂಜೆ 6.30 ರ ಸಮಯದಲ್ಲಿ ಚಾಸ 1 ರವರು ಮರವನ್ನು ಬೇರೆಯವರಿಗೆ ಮಾರಾಟ ಮಾಡಿದ್ದರು. ಅವರು ಹಣವನ್ನು ಕೊಟ್ಟಿದ್ದಿರಲಿಲ್ಲ, ಹಾಗಾಗಿ ಚಾಸಾ1 ರವರು ದಳ್ಳಾಳಿಗಳಿಗೆ ಪೋನಿನಲ್ಲಿ ಬೈಯ್ಯುತ್ತಿದ್ದರು. ಆಗ ಆರೋಪಿಗಳು ತಮಗೇ ಬೈಯ್ಯುತ್ತಿದ್ದಾರೆ ಎಂದು ಏಕಾಏಕಿ ಬಂದು ಹಲ್ಲೆ ಮಾಡಿ ಅವಾಚ್ಯಶಬ್ದಗಳಿಂದ ಬೈಯ್ದು, ದೊಣ್ಣೆ ಮತ್ತು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-8 ಃಪ್ರಾಸಾ-4 ರವರು ಮಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳು ತನಗೆ ಪೋನ್ ಮಾಡಿ ನಿನ್ನ ತಾಯಿಯವರಿಗೆ ಹೊಡೆದಿರುತ್ತೇವೆ ಏನು ಮಾಡುತ್ತೀಯೋ ಮಾಡಿಕೊ ಎಂದು ಹೇಳಿರುತ್ತಾರೆ. ತಾನು ಬೆಂಗಳೂರಿನಿಂದ ಬಂದು ನೋಡಿದಾಗ

ತನ್ನ ತಾಯಿಯವರಿಗೆ ಜಾಸ್ತಿ ಏಟುಗಳು ಆಗಿದ್ದವು. ನಂತರ ರಾತ್ರಿ 8.30ಕ್ಕೆ ಮಾಗಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ, ನಂತರ ದೂರನ್ನು ಕೊಟ್ಟಿರುತ್ತೇವೆ. ಪೋಲಿಸರು ನನ್ನ ಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-9 ಃ ಪ್ರಾಸಾ-5 ಡಾಃ ಹೇಮಶ್ರೀ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 29-01-2024 ರಂದು ಸುಮಾರು ರಾತ್ರಿ 11.40 ರ ಸಮಯದಲ್ಲಿ ರಾಜಮ್ಮ ಕೋಂ ಲೇಟ್ ರಂಗಯ್ಯ, 71 ವರ್ಷ, ವಾಸಃ ದಂಡಿಗೆಪುರ ಗ್ರಾಮ ರವರು ತಿಲಕ್ ಎಂಬುವರು ದೊಣ್ಣೆಯಿಂದ ದಿನಾಂಕಃ 29-01-2024 ರಂದು ಸಂಜೆ 6.30 ಕ್ಕೆ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-10 ಃ ಪ್ರಾಸಾ-5ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಸದರಿಯವರರಿಗೆ

1. Contusion measuring 5 X 4 C.M. over left arm.
2. Contusion with swelling measuring 6 X 6 C.M. over dorsum of left foram.
3. 3 X 3 C.M. contusion over right arm.
4. 4 X 4 C.M. contusion over right Hypochondrium.
5. 5 X 4 C.M. contusion over left Gluteal region ಗಾಯ ಕಂಡು ಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಸದರಿ ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗಾಯದ ಸ್ವರೂಪಗಳು ಕಬ್ಬಿಣ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-11 ಃ ಪ್ರಾಸಾ-6 ಕೃಷ್ಣಪ್ಪ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.01.2024 ರಂದು ತಾನು ಮಾಗಡಿ ಪೋಲಿಸ್ ಠಾಣಾ ಕರ್ತವ್ಯದಲ್ಲಿದ್ದಾಗ ಮಾಗಡಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋ ಪಡೆದು ಪರಿಶೀಲಿಸಲಾಗಿ ಶ್ರೀಮತಿ ರಾಜಮ್ಮ ಎಂಬುವವರು ಗ್ರಾಮದಲ್ಲಿ ಗಲಾಟೆ ಮಾಡಿಕೊಂಡು ಗಾಯಗಳಾಗಿದ್ದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ತಿಳಿದುಬಂದಿದ್ದು 12.30 ಗಂಟೆಗೆ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ವೈದ್ಯಾಧಿಕಾರಿಗಳ ಅನುಮತಿಯನ್ನು ಪಡೆದು ಚಾಸಾ 1ರವರ ಹೇಳಿಕೆಯನ್ನು ಪಡೆದುಕೊಂಡು ಪುನಃ 2.00 ಗಂಟೆಗೆ ಠಾಣೆಗೆ ಬಂದು ಠಾಣಾ ಮೊಕದ್ದಮೆ ನಂ. 21/2024 ರಂತೆ ಕಲಂ 324,504,506 ಸಹಕಲಂ 34 ಐಪಿಸಿ ರೀತ್ಯ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತೇನೆಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-12 ಃ ಪ್ರಾಸಾ-6 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02.02.2024 ರಂದು ಕೃತ್ಯ ಸ್ಥಳದ ಪಂಚನಾಮೆಗಾಗಿ ಚಾಸಾ 2 ಮತ್ತು 5 ರವರಿಗೆ ನೋಟಿಸ್ ಜಾರಿಮಾಡಿ ಸ್ಥಳಕ್ಕೆ ಬರುವಂತೆ ತಿಳಿಸಿದ್ದು ಅದರಂತೆ ಚಾಸಾ 1ರವರು ಕೃತ್ಯ ಸ್ಥಳವನ್ನು ತೋರಿಸಿದಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 11.30 ಗಂಟೆಯವರೆಗೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಚಾಸಾ1 ರವರು 2 ½ ಅಡಿ ಉದ್ದ ಒಂದು ಹಿಡಿಗಾತ್ರದ ದೊಣ್ಣೆಯನ್ನು ಹಾಗೂ 2 ಅಡಿ ಉದ್ದದ ಹೆಬ್ಬೆರಳು ಗಾತ್ರದ ಒಂದು ಕಬ್ಬಿಣದ ರಾಡನ್ನು ಹಾಜರು ಪಡಿಸಿದ್ದು ಅವುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**
**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-13 ಃ ಪ್ರಾಸಾ-6 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.01.2024 ರಂದು ಆರೋಪಿಗಳು ಠಾಣೆಗ ಹಾಜರಾಗಿದ್ದು ದಸ್ತಗಿರಿ ಕ್ರಮ ಜರುಗಿಸಿ ಠಾಣ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 02.02.2024 ರಂದು ಚಾಸಾ 2ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 03.02.2024 ರಂದು ಚಾಸಾ 1 ರವರ ಗಾಯದ ಪ್ರಮಾಣಪತ್ರವನ್ನು ಮಾಗಡಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಿಂದ ಚಾಸಾ6ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ06.02.2024

ರಂದು ಮಾನ್ಯ ನ್ಯಾಯಾಲಯಕ್ಕೆ ತಿಲಕ್ ಮತ್ತು ನೇತ್ರಾವತಿರವರ ವಿರುದ್ದ ಆರೋಪಿ ಸಾಭೀತಾದ ಕಾರಣ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-14 ಃ ಪ್ರಾಸಾ-7 ರಾಣಿ ರವರು** ತಮ್ಮ ಸಾಕ್ಷ್ಯದಲ್ಲಿ ಒಂದು ವರ್ಷದ ಹಿಂದೆ ತಾನು ಮತ್ತು ತನ್ನ ಯಜಮಾನರಾದ ಚಾಸಾ2 ರವರು ಸಂಜೆ 6.30 ಗಂಟೆಗೆ ಮನೆಯ ಹತ್ತಿರ ಇದ್ದಾಗ ಚಾಸಾ 1 ರವರಾದ ರಾಜಮ್ಮ ರವರು ಮನೆಗೆ ಬಂದರು. ಆಗ ತಾವು ಏನು ಎಂದು ಕೇಳಿದೆವು. ಆಗ ಚಾಸಾ 1ರವರು ತಿಲಕ್ ಎಂಬುವವರು ಹೊಡೆದಿರುತ್ತಾರೆ ಎಂದು ತಿಳಿಸಿದರು. ಆಗ ತಾನು ಮತ್ತು ಚಾಸಾ 2 ರವರು ಸದರಿ ತಿಲಕ್ ರವರ ಮನೆಯ ಹತ್ತಿರ ಹೋಗಿ ಏಕೆ ಹೊಡೆದಿರುತ್ತೀರಿ ಎಂದು ಕೇಳಿದೆವು. ಆಗ ತಿಲಕ್ ರವರು ತಮ್ಮ ಮುಂದೆಯೆ ಚಾಸಾ 1 ರವರ ಕಪಾಳಕ್ಕೆ ಹೊಡೆದರು. ಆಗ ಚಾಸಾ 1 ರವರು ಬಿದ್ದು ಒಳ್ಳಾಡಿರುತ್ತಾರೆ. ನಮ್ಮ ಮುಂದೆಯೆ ಹೊಡೆದಿರುತ್ತೀಯಲ್ಲಾ ಎಂದು ಕೇಳಿ ವಾಪಸ್ಸು ಮನೆಗೆ ಬಂದಿರುತ್ತೇವೆ. ಪೋಲಿಸರು ನನ್ನ ವಿಚಾರಣೆಯನ್ನು ಮಾಡಿ ಹೇಳಿಕೆ ಪಡೆದಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-15 ಃ** ನೀವು ಏನಾದರೂ ಹೇಳಲು ಬಯಸುವಿರಾ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

**ಪ್ರಶ್ನೆ-16 ಃ** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

**1ನೇ ಆರೋಪಿ ಉತ್ತರ ಃ**

**2ನೇ ಆರೋಪಿ ಉತ್ತರ ಃ**

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 11.03.2026 ರಂದು ಸಹಿ ಮಾಡಿರುತ್ತಾರೆ )

(ಶ್ರೀ ಶ್ರೀನಿವಾಸ ಕೆ ಆರ್. )
ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

**ಆರೋಪಿತರ ಸಹಿ ಃ**